1030 (1226) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುದ್ದೇಬಿಹಾಳದಲ್ಲಿ ಸರ್ಕಾರಿ ಪದವಿ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಗ್ರಾಮೀಣ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುದ್ದೇಬಿಹಾಳದಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಡಕುಗಳೇನು ;

ಇ) ಮುದ್ದೇಬಿಹಾಳ ತಾಲ್ಲೂಕು ಕೇಂದ್ರಕ್ಕೆ ಸರ್ಕಾರವು ಯಾವಾಗ ಪದವಿ ಕಾಲೇಜನ್ನು ಮಂಜೂರು ಮಾಡಲಾಗುವುದು ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಯಾವುದೇ ತೊಡಕಿರುವುದಿಲ್ಲ.

ಇ) 2007–08ನೆ ಸಾಲಿನಿಂದ ಪ್ರಾರಂಭಿಸಲಾಗಿದೆ.

1031 (512) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಂಗಭದ್ರಾ ಎಡದಂಡೆ ಹಾಗೂ ಉಪಕಾಲುವೆಗಳ ಆಧುನೀಕರಣದ ಕಾಮಗಾರಿಗಳಿಗೆ ಈ ಸಾಲಿನಲ್ಲಿ ಬಿಡುಗಡೆ ಮಾಡಿದ ಮೊತ್ತವೆಷ್ಟು ; ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ ; ಕಾಮಗಾರಿಗಳು ಯಾವ ಹಂತದಲ್ಲಿವೆ ;

ಆ) ಎಡದಂಡೆ ನಾಲೆಯ ಆಧುನೀಕರಣ ಮಾಡಲು ಚೀನಿವಾಲರವರ ವರದಿಯನ್ನು ರಾಜ್ಯ ಸರ್ಕಾರ ಒಪ್ಪಿದೆಯೇ ; ವರದಿಯಲ್ಲಿ ಎಷ್ಟು ಅಂದಾಜು ಮಾಡಲಾಗಿದೆ ; ಈ ವರದಿ ಆಧಾರದ ಮೇಲೆ ಈ ವರ್ಷ ಬಿಡುಗಡೆ ಮಾಡಿದ ಮೊತ್ತವೆಷ್ಟು ;

ಇ) ತುಂಗಭದ್ರಾ ಬೋರ್ಡಿನಿಂದ ಎಡದಂಡೆ, ಬಲದಂಡೆ ಮುಖ್ಯ ನಾಲೆಯ ನೀರಿನ ಸರಬರಾಜಿನ ಲೆಕ್ಕಾಚಾರದಲ್ಲಿ ಮಾಡಿರುವ ಲೋಪದೋಷ ಅಂಕಿ ಅಂಶಗಳಿಂದ ರೈತರಿಗೆ ಆಗುವ ಹಾಗೂ ನೀರಿನ ಕೊರತೆಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):–

ಅ) ತುಂಗಭದ್ರಾ ಎಡದಂಡೆ ಕಾಲುವೆ ಹಾಗೂ ಉಪಕಾಲುವೆಗಳ ಆಧುನೀಕರಣ ಕಾಮಗಾರಿಗಳಿಗೆ 2007–08ನೇ ಸಾಲಿನ ಆಯವ್ಯಯದಲ್ಲಿ ಒಟ್ಟು 25.00 ಕೋಟಿ ರೂ.ಗಳನ್ನು (ತುಂಗಭದ್ರಾ ಎಡದಂಡೆ ಕಾಲುವೆಗೆ ರೂ. 20.00 ಕೋಟಿಗಳು, ತುಂಗಭದ್ರಾ ವಿತರಣಾ ಕಾಲುವೆಗಳಿಗೆ ರೂ. 5.00 ಕೋಟಿ) ಒದಗಿಸಲಾಗಿದೆ.

ಈ ಕಾಮಗಾರಿಗಳನ್ನು 2007ರ ಕಾಲುವೆ ಕ್ಲೋಜರ್‌ನಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲಾಗಿದೆ.

ಆ) ಚಿನ್ನಿವಾಲ್ ಸಮಿತಿಯ ವರದಿಯನ್ನು ಪೂರ್ಣವಾಗಿ ಜಾರಿಗೊಳಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ ವರದಿಯಲ್ಲಿ ತುಂಗಭದ್ರಾ ಎಡದಂಡೆ ಕಾಲಿವೆಯನ್ನು ಬಲಪಡಿಸಲು ಒಟ್ಟು ರೂ. 210.00 ಕೋಟಿಗಳು ಬೇಕಾಗುವುದೆಂದು ಅಂದಾಜಿಸಲಾಗಿದೆ.

ಈ ವರದಿಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು 2007–08ನೇ ಸಾಲಿನಲ್ಲಿ ರೂ. 20.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಇ) ತುಂಗಭದ್ರಾ ಯೋಜನೆಯಡಿಯಲ್ಲಿನ ವಿವಿಧ ನಾಲೆಗಳ ನೀರಿನ ಸರಬರಾಜಿನ ಲೆಕ್ಕಾಚಾರದಲ್ಲಿ ತುಂಗಭದ್ರಾ ಮಂಡಳಿಯು ಲೋಪದೋಷ ಎಸಗುತ್ತಿದೆ ಎಂಬ ದೂರುಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತುಂಗಭದ್ರಾ ಮಂಡಳಿಯನ್ನು ಕೋರಲಾಗುತ್ತಿದೆ.

1032 (513) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಂಗಭದ್ರಾ ಅಣೆಕಟ್ಟಿನಲ್ಲಿ ನೀರಿನ ಲೆಕ್ಕಾಚಾರ ಮಾಡುವಾಗ ನೆಗೆಟಿವ್ ಇನ್ ಫ್ಲೋ ತೆಗೆದು ಲೆಕ್ಕ ಮಾಡುವ ಪದ್ಧತಿ ಇದೆಯೇ ? ಇದು ಯಾವ ವರ್ಷದಿಂದ ಇದೆ ಹಾಗೂ ನೆಗೆಟಿವ್ ಇನ್ ಫ್ಲೋ ಅಂದರೇನು ;

ಈ ನೆಗೆಟಿವ್ ಇನ್‌ಫ್ಲೋ ನೀರಿನ ಲೆಕ್ಕದಲ್ಲಿ ತೆಗೆದು ಲೆಕ್ಕಾಚಾರ ಮಾಡುವುದರಿಂದ ಎಡದಂಡೆ, ಬಲದಂಡೆ ನಾಲೆಯ ರೈತರಿಗೆ ನೀರಿನ ಕೊರತೆಯಾಗುವುದಿಲ್ಲವೆ ;

ಈ ವಿಚಾರದಲ್ಲಿ ತುಂಗಭದ್ರಾ ಬೋರ್ಡ್‌ನ ಜೊತೆಗೆ ಕಾನೂನಿನ ವ್ಯಾಪ್ತಿಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ;